Indian Journal Of History and Archaeology

INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,71-77
Peer Reviewed Journal, Referred Journal

IJHA JOURNALS www.IJHA.IN

# ಕರ್ನಾಟಕದಲ್ಲಿ ಮೌರ್ಯರ ಆಡಳಿತ ಮತ್ತು ಬೌದ್ಧಧಮ್ಮದ ರಾಜಕೀಯ ಚರಿತ್ರೆ: ಒಂದು ಗ್ರಹಿಕೆ

**ಡಾ.ಕೆ.ಪ್ರಭು**[1]

ಪ್ರಾಚೀನ ಭಾರತ ದೇಶದಲ್ಲಿ ಮತ್ತು ಅದೇ ಕಾಲಸಂದರ್ಭದ ಕರ್ನಾಟಕ ರಾಜ್ಯದಲ್ಲಿನ ಜನತೆಯ ಧಾರ್ಮಿಕ ಬದುಕಿನಲ್ಲಿ ಬಹುಹಿಂದಿನಿಂದಲೂ ಹಲವು ಹತ್ತು ಧರ್ಮಗಳು ಹುಟ್ಟಿ ಬೆಳೆದು ಪ್ರಬುದ್ಧಮಾನಕ್ಕೆ ಬಂದಿರುತ್ತವೆ. ಹಾಗೆಯೇ ಅವುಗಳ ಪ್ರತಿಪಾದಕರು ತಾವು ಬದುಕಿದ್ದ ಕಾಲಾನುಕ್ರಮದ ಕಾಲಜ್ಞಾನದಲ್ಲಿ ಕಂಡಂತಹ ವಿಚಾರಗಳನ್ನು ಸಮಾಜಕ್ಕೆ ಮತ್ತು ಅಲ್ಲಿನ ಜನತೆಗೆ ಪ್ರತಿಹಂತದಲ್ಲಿಯೂ ಬೋಧಿಸುತ್ತಾ ಬಂದಿರುವುದನ್ನು ಗುರುತಿಸಬಹುದು. ಆ ಕಾರಣ ಮತ್ತು ಪರಿಣಾಮದಿಂದಾಗಿಯೇ ಈ ಸಮನ್ವಯತೆಯ ಶಾಂತಿ, ಪ್ರೀತಿ, ಕಾರುಣ್ಯದಂತಹ ಮಾನವಪರ ಮತ್ತು ಜೀವಪರ ತತ್ತ್ವಗಳು ಸಮಾಜದಲ್ಲಿನ ಜನತೆಯ ಧಾರ್ಮಿಕ ಶ್ರದ್ಧೆ ಸಮನ್ವಯತೆ ಔದಾರ್ಯ ಹಾಗೂ ಇಲ್ಲಿನ ಪರಿಸರವೂ ಪ್ರಾಚೀನ ಕಾಲದಿಂದಲೂ ಧಾರ್ಮಿಕ ನಂಬಿಕೆಗಳನ್ನು ಹಾಗೂ ಧರ್ಮಗಳನ್ನು ಆಕರ್ಷಿಸುತ್ತಲ್ಲೇ ಬಂದಿರುತ್ತವೆ. ಈ ನೆಲೆ ಮತ್ತು ಹಿನ್ನೆಲೆಯಿಂದ ಗ್ರಹಿಸಿದಾಗ; ಸರ್ವೇಸಾಮಾನ್ಯವಾಗಿ ಭಾರತದ ಧಾರ್ಮಿಕ ಪರಿಸ್ಥಿತಿಯ ಬೆಳವಣಿಗೆಯು ಸನಾತನಿಯ ವೈದಿಕ ಪಂಥವೇ ಅತ್ಯಂತ ಪ್ರಾಚೀನ ಪಂಥವೆಂದು ತಿಳಿಸುತ್ತದೆ. ಆದರೆ, ಸಿಂಧೂ ಕಣಿವೆಯ ಹರಪ್ಪಾ ಸಂಸ್ಕೃತಿಯಲ್ಲಿ ಕಂಡುಬರುವ ಹಲವು ಹತ್ತು ದೇವತಾ ಆಕೃತಿಗಳು ನಿರ್ದಿಷ್ಟ ಪಂಥ ಒಂದನ್ನು ಮಾತ್ರ ಪ್ರತಿಬಿಂಬಿಸುತ್ತವೆ ಎಂದು ಹೇಳಲಾಗುತ್ತದೆ. ಹೀಗಾಗಿ ವಿಭಿನ್ನ ನೆಲೆಯಲ್ಲಿನ ಧಾರ್ಮಿಕ ಪಂಥಗಳು ಸನಾತನಿಯ ವೈದಿಕ ಯುಗದಿಂದಲ್ಲೇ ಬೆಳೆದು ಬಂದಿರುತ್ತವೆ ಎಂದೇ ಹೇಳಬಹುದು. ಆದರೆ, ಅವುಗಳಲ್ಲಿ ಸನಾತನಿಯ ವೈಷ್ಣವ, ಶೈವ, ಶಾಕ್ತ ಪಂಥಗಳು ಅತ್ಯಂತ ಪ್ರಾಚೀನ ನಂಬಿಕೆಗಳಾಗಿವೆ. ಈ ಅಸಮಾನತೆಯ ಪಂಥಗಳ ಕ್ರೌರ್ಯವನ್ನು ತಪ್ಪಿಸುವ ಸಲುವಾಗಿಯೇ ಕ್ರಿ.ಪೂ. 6ನೇ ಶತಮಾನದಲ್ಲಿ ಭಾರತೀಯ ಅಸಮಾನತೆಯ ಕಾಲಸಂದರ್ಭದಲ್ಲಿ ಅದರಲ್ಲೂ ಪ್ರಧಾನವಾಗಿ ಏಕತ್ವವಾದವನ್ನು ಪ್ರತಿಪಾದಿಸುತ್ತಿದಂತಹ ವೈದಿಕತೆಯ ವಿರುದ್ಧವಾಗಿಯೇ ಉಗಮವಾದ ಜೈನಧರ್ಮ ಮತ್ತು ಬೌದ್ಧಧಮ್ಮಗಳು ಭಾರತ ದೇಶದ ಮತ್ತು ಅದರಲ್ಲೂ ಪ್ರಧಾನವಾಗಿ ಕರ್ನಾಟಕದ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ತಮ್ಮದೇ ಆದಂತಹ ಛಾಪಿನ ಮುದ್ರೆಯನ್ನು ಹಾಕಿ ಆ ಮುಖೇನ ಸ್ಥಾನಮಾನಗಳನ್ನು

1. **ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು**

ಪಡೆದುಕೊಂಡು ಬೆಳವಣಿಗೆಯನ್ನು ಕೂಡ ಹೊಂದಿದ್ದವು. ಅದರಲ್ಲಿ ಕೇವಲ ಭಾರತ ಅಷ್ಟೇ ಅಲ್ಲದೇ ವಿದೇಶದಲ್ಲಿಯೂ ಕೂಡ ಪ್ರಚಾರಕ್ಕೆ ಬಂದಂತಹ ಬೌದ್ಧಧಮ್ಮವೂ ಕರ್ನಾಟಕದ ರಾಜಕೀಯ ಚರಿತ್ರೆಯ ಕಾಲಸಂದರ್ಭದಲ್ಲಿ ಬಹುಮುಖ್ಯವಾದಂತಹ ಸ್ಥಾನವನ್ನೇ ಪಡೆದುಕೊಂಡಿರುತ್ತದೆ ಎಂಬುದನ್ನು ಪ್ರಸ್ತುತ ಲೇಖನದ ಮೂಲಕ ಗುರುತಿಸಬಹುದು.

ಬೌದ್ಧಧಮ್ಮವೂ ಉತ್ತರ ಭಾರತದಲ್ಲಿ ಉಗಮಗೊಂಡು ಆ ಪ್ರದೇಶಕ್ಕೆ ಮಾತ್ರವೇ ಸೀಮಿತಗೊಳ್ಳದೇ ಇಡೀ ದೇಶವನ್ನೇ ತನ್ನ ಮಾನವಪರ ಮತ್ತು ಜೀವಪರ ಮಾನವಪ್ರೇಮಗಳ ಬಾಹುಗಳಿಂದ ಆವರಿಸಿ ವ್ಯಾಪಿಸಿರುತ್ತದೆ. ಅದರಲ್ಲೂ ಪ್ರಧಾನವಾಗಿ ದಕ್ಷಿಣ ಭಾತರದಲ್ಲೂ ಕೂಡ ಹೆಚ್ಚು ಪ್ರಭಾವಿಸುವ ಮುಖೇನ ಪ್ರಚಾರಕ್ಕೆ ಬಂದಿರುವಂತಹ ಈ ಬೌದ್ಧಧಮ್ಮವೂ ನಮ್ಮ ಪ್ರಾಚೀನ ಕನ್ನಡ ನಾಡನ್ನು ಆಳಿದಂತಹ ಹಲವು ಹತ್ತು ರಾಜಮನೆತನದಲ್ಲಿನ ಅರಸರ ಆಳ್ವಿಕೆಯ ಕಾಲಸಂದರ್ಭದಲ್ಲಿ ಆಶ್ರಯ ಪಡೆದು ಕರ್ನಾಟಕ ರಾಜ್ಯದ ರಾಜಕೀಯ ಚರಿತ್ರೆಯ ಮೇಲೆ ತನ್ನದೇ ಆದಂತಹ ರಾಜಕೀಯ ಪ್ರಭಾವವನ್ನು ಬೀರಿರುತ್ತದೆ. ಆದರೆ, ಪ್ರಸ್ತುತ ಮೌರ್ಯರ ಆಡಳಿತದಲ್ಲಿ ಅವರ ರಾಜಕೀಯ ಚರಿತ್ರೆಯ ಮೇಲೆ ಹೇಗೆ ಬೀರಿರುತ್ತದೆ ಎಂಬುದನ್ನು ಮಾತ್ರ ಈ ಲೇಖನದ ಮೂಲಕವಾಗಿಯೇ ಬಹುಸೂಕ್ಷ್ಮವಾಗಿಯೇ ಗ್ರಹಿಸಲಾಗಿದೆ.

ಕನ್ನಡ ನಾಡನ್ನು ಆಳಿದ ಪ್ರತಿಯೊಂದು ಅರಸರ ರಾಜಮನೆತನಗಳು ಯಾವುದಾದರೂ ಒಂದು ಧರ್ಮದ ನಂಬಿಕೆಯ ಆಧಾರದ ಮೇಲೆಯೇ ತಮ್ಮ ರಾಜ್ಯಭಾರ ಮಾಡುವ ಪದ್ಧತಿಯನ್ನು ಅನುಸರಿಕೊಂಡೇ ಬಂದಿರುವುದನ್ನು ಗುರುತಿಸಬಹುದು. ಅವರಲ್ಲಿ ಕೆಲವೇ ಕೆಲವು ರಾಜರು ಕಾಲ ಕಾಲಕ್ಕೆ ಬದಲಾವಣೆಗೊಂಡು ಅವರ ಧಾರ್ಮಿಕ ವಿಚಾರಗಳು ಬೇರೆಯಾಗುವ ಅಂಶವೂ ಕೂಡ ರಾಜ್ಯಾಡಳಿತದ ಚರಿತ್ರೆಯಲ್ಲಿ ತಿಳಿದುಬಂದಿರುತ್ತದೆ. ಅನೇಕ ಮನೆತನಗಳ ಅರಸರು ತಮ್ಮ ಮನದ ಆಸೆಯಂತೆ ಧರ್ಮವನ್ನು ಅನುಸರಿಸುವ ಮಾರ್ಗವನ್ನು ಕೂಡ ಹಿಡಿದಿದ್ದರು. ಇದೇ ಅಲ್ಲದೇ ಇನ್ನೂಳಿದ ಅರಸರು ಧರ್ಮದಿಂದ ಧರ್ಮಕ್ಕೆ ಅನುಯಾಯಿಗಳಾದ ಅಂಶಗಳು ಕರ್ನಾಟಕದ ರಾಜಕೀಯ ಇತಿಹಾಸದ ಕಾಲಸಂದರ್ಭದಲ್ಲಿ ಹೆಚ್ಚಿನದಾಗಿಯೇ ಕಂಡುಬರುತ್ತದೆ ಎಂದು ಹೇಳಬಹುದು. ಅದೇ ರೀತಿ ಪ್ರಾಚೀನ ಕರ್ನಾಟಕವನ್ನು ಆಳಿದ ಮೌರ್ಯ ಸಾಮ್ರಾಟರು, ಶಾತವಾಹನರು, ಗಂಗರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಸೇವುಣರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಪ್ರಮುಖರು. ಹೀಗೆ, ಪ್ರತಿಯೊಬ್ಬರು ಕೂಡ ಬೇರೆ ಬೇರೆ ಧರ್ಮಗಳನ್ನು ಪಾಲಿಸಿದವರೇ ಆಗಿದ್ದರು. ಆದರೂ ಕೂಡ ಬೌದ್ಧಧಮ್ಮಕ್ಕೆ ತಮ್ಮದೇ ಆದ ರೀತಿಯಲ್ಲಿ ಮೌರ್ಯ ಸಾಮ್ರಾಟರು ರಾಜಾಶ್ರಯ ನೀಡಿದ್ದನ್ನು ಪ್ರಸ್ತುತ ಹೆಚ್ಚು ಗ್ರಹಿಸಲಾಗಿದೆ. ಧಾರ್ಮಿಕ ಶುದ್ಧತೆ ಪಾಲಿಸಿಕೊಂಡು ಬಂದಂತಹ ಮೌರ್ಯರು ವಾಸ್ತುಶಿಲ್ಪಕ್ಕೆ ಹೆಚ್ಚಿನ ಮಹತ್ವ ನೀಡಿದ್ದನ್ನು ಗುರುತಿಸಬಹುದು. ಹೀಗಾಗಿ ಇವರ ಆಡಳಿತದ ಕಾಲದಲ್ಲಿ ಶಿಲಾ ಶಾಸನಗಳು, ವಿಹಾರಗಳು,

ಸ್ತೂಪಗಳು, ಚೈತ್ಯಾಲಯಗಳು ಕರ್ನಾಟಕದ ತುಂಬೆಲ್ಲಾ ರಚಿತಗೊಂಡಿರುವುದನ್ನು ಗುರುತಿಸಲಾಗಿರುತ್ತದೆ.ಹೀಗೆ ಇವರ ಕಾಲದ ಪ್ರಮುಖ ಬೌದ್ಧ ನೆಲೆಗಳ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.

ಮೌರ್ಯ ಸಾಮ್ರಾಜ್ಯವೂ ಲಿಖಿತ ದಾಖಲೆಗಳ ಇತಿಹಾಸ ಯುಗದ ಆರಂಭವೂ ಕರ್ನಾಟಕದಲ್ಲಿ ಸುಮಾರು ಕ್ರಿ.ಪೂ. 500 ರಿಂದ ಆರಂಭವಾಗುತ್ತದೆ ಎಂದು ಗುರುತಿಸಲಾಗಿದೆ. ಅಶೋಕ ಮೌರ್ಯ ಸಾಮ್ರಾಟರಲ್ಲಿ ಖಡ್ಗವನ್ನು ಸಂಪೂರ್ಣವಾಗಿ ತ್ಯಜಿಸಿ ಬೌದ್ಧಧಮ್ಮದ ಮೂಲಕ ಆಡಳಿತದ ಆಧಾರವನ್ನೇ ಬದಲಿಸಿದನು. ಆದ್ದರಿಂದಲೇ ಅದರ ಕುರುಹುವಾಗಿಯೇ ಕರ್ನಾಟಕ ರಾಜ್ಯದಲ್ಲಿ ಸಾಮ್ರಾಟ ಅಶೋಕನ ಶಾಸನಗಳಗೂ ಕೂಡ ಎರಡು ಶತಮಾನಗಳಷ್ಟೂ ಹಿಂದಿನ ಸಾಹಿತ್ಯದ ಪರಂಪರೆ ಇದ್ದು, ಆಕಾಲದ ಇತಿಹಾಸದ ಕೆಲವು ಇಣುಕು ನೋಟಗಳು ಲಭಿಸುತ್ತವೆ. ಮಗಧದ ನಂದರು ಕರ್ನಾಟಕದ ಕೆಲವು ಭಾಗಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸಿ ಆಳ್ವಿಕೆಯನ್ನು ನಡೆಸಿದ್ದರೆಂಬ ಸಾಹಿತ್ಯದ ಕಥೆಗಳುಂಟು. ಅದರ ಪ್ರಕಾರವಾಗಿಯೇ ಪರಿವೀಕ್ಷಿಸಿದಾಗ; ಕ್ರಿ.ಶ. ಸುಮಾರು 1500ರ ಸಿಂಗಿರಾಜಪುರಾಣವೆಂಬ ಕನ್ನಡ ಕಾವ್ಯವು ಪಟ್ಟದ ಕಲ್ಲಿನ ಇತಿಹಾಸ ತಿಳಿಸುವಾಗ ಆ ಸ್ಥಳ ನವನಂದರಿಂದ ಆಳಲ್ಪಟ್ಟಿತ್ತೆಂದು ಹೇಳುತ್ತದೆ. 11ನೇ ಶತಮಾನದ ಕೆಲವು ಕನ್ನಡ ದಾಖಲೆಗಳಂತೆ ನಂದರು ಕುಂತಳದಲ್ಲೂ ಅಧಿಕಾರ ಹೊಂದಿದ್ದರು. ಈ ಆಧಾರಗಳು ಸಮಕಾಲಿನವಲ್ಲವಾದರೂ ನಂದರ ಉತ್ತರಾಧಿಕಾರಿಗಳಾದ ಮೌರ್ಯರು ಕರ್ನಾಟಕದ ಭಾಗಗಳ ಮೇಲೆ ಅಧಿಕಾರ ಹೊಂದಿದ್ದರಿಂದ ಅವರ ಹಿಂದಿನ ನಂದರಿಗೂ ಇಲ್ಲಿ ಅಧಿಕಾರವಿತ್ತೆಂದು ಹೆಚ್ಚಿನ ಆಧಾರಗಳಿಂದಲೇ ನಂಬಬಹುದು. ಮೌರ್ಯ ಸಾಮ್ರಾಟರು ಇಡೀ ನಂದರ ಸಾಮಾಜ್ಯವನ್ನು ಗೆದ್ದು ಆ ಮುಖೇನ ತಮ್ಮ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ್ದರು ಎಂಬುದು ಭಾರತದ ರಾಜಕೀಯ ಚರಿತ್ರೆಯಲ್ಲಿ ಅಚ್ಚಳಿಯದೇ ಇರುವಂತಹ ಮುದ್ರೆಯೇ ಆಗಿರುತ್ತದೆ.

ಭಾರತದಲ್ಲೇ ಒಂದು ಏಕೀಕೃತ ಸಾಮ್ರಾಜ್ಯವನ್ನು ವ್ಯಾಪಕವಾಗಿ ಸ್ಥಾಪಿಸಿದಂತಹ ಕೀರ್ತಿಯೂ ಈ ಮೌರ್ಯ ಸಾಮ್ರಾಟರಿಗೆ ಹೆಚ್ಚಿನದಾಗಿಯೇ ಸಲ್ಲುತ್ತದೆ. ಚಾಣಕ್ಯನೆಂಬ ಬುದ್ಧಿವಂತ ಕೌಟಿಲ್ಯ ಮಂತ್ರಿಯ ಮಾರ್ಗದರ್ಶನದಲ್ಲಿ ನಂದರ ವಿರುದ್ಧ ಜಯವನ್ನು ಸಾಧಿದ್ದಂತಹ ಮೌರ್ಯ ಪ್ರಥಮ ಅರಸ ಚಂದ್ರಗುಪ್ತ ಮೌರ್ಯನು ತಮ್ಮ ಮೌರ್ಯ ಸಾಮ್ರಾಜ್ಯಕ್ಕೆ ಭದ್ರಬುನಾದಿಯೊಂದನ್ನು ಹಾಕಿದನು. ಅದುವೇ ಹತ್ತು ಹಲವು ಸಾಧನೆಗಳನ್ನು ಮಾಡಿ ಮೌರ್ಯ ಸಾಮ್ರಾಜ್ಯವನ್ನು ಭಾರತದ ತುಂಬೆಲ್ಲಾ ಹರಡಿದನು. ಕರ್ನಾಟಕ ರಾಜ್ಯದಲ್ಲಿನ ಹಾಸನ ಜಿಲ್ಲೆಯ ಶ್ರವಣ ಬೆಳಗೊಳದಲ್ಲಿರುವಂತಹ 7ನೇಯ ಶತಮಾನದ ಶಾಸನ ಒಂದರಂತೆಯೇ ಚಂದ್ರಗುಪ್ತ ಮೌರ್ಯನು ತನ್ನ ಸಿಂಹಾಸನ ತ್ಯಜಿಸಿ ಮಕ್ಕಳಿಗೆ ವಹಿಸಿ, ಅನಂತರ ಕರ್ನಾಟಕದ ಈ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದ್ದನು ಎಂಬುದನ್ನು ಹಲವು ಸಂಶೋಧನೆಯ ಸಾಕ್ಷಿಗಳ ಸಹಿತ ಧೃಡಪಡಿಸುತ್ತವೆ. ಜೈನಧರ್ಮ ಸ್ವೀಕರಿಸಿ ತನ್ನ ಗುರು ಭದ್ರಬಾಹುವಿನ ಜೊತೆಗೆಯೇ ಬಂದಂತ ಈ ಚಂದ್ರಗುಪ್ತ ಮೌರ್ಯನು ತನ್ನ ಅಂತ್ಯದಲ್ಲಿ ಇಲ್ಲೇ ಪರಿನಿಬ್ಬಾಣವನ್ನು

ಹೊಂದಿದನು ಎಂಬುದನ್ನು ಕೂಡ ಗ್ರಹಿಸಬಹುದು. ಹೀಗೆ, ಈತನು ನೆಲೆಸಿ ನಿರ್ವಾಣವನ್ನು ಹೊಂದಿರುವಂತಹ ಸ್ಥಳವೇ ಚಂದ್ರಗಿರಿಯೆಂದೇ ಪ್ರಸಿದ್ಧವಾಗಿದೆ. ಈ ಒಂದು ಆಧಾರವೇ ಮೌರ್ಯರ ಆಳ್ವಿಕೆ ಕರ್ನಾಟಕದೊಂದಿಗಿನ ಸಂಬಂಧದ ಬಗೆಗೆ ತಳಸ್ಪರ್ಶಿಯಾಗಿಯೇ ತಿಳಿಸುತ್ತದೆ. ಮುಂದೆ ಅಧಿಕಾರಕ್ಕೆ ಬಂದಂತಹ ಪ್ರಖ್ಯಾತ ಸಾಮ್ರಾಟನಾಗಿದ್ದಂತಹ ಅಶೋಕನ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದ ಕೆಲವು ಭಾಗಗಳಲ್ಲಿ ನೇರ ಆಳ್ವಿಕೆಗೆ ಒಳಪಟ್ಟಿದ್ದು ಶಾಸನಗಳಿಂದಲೇ ತಿಳಿದುಬರುತ್ತದೆ. ಮೌರ್ಯ ವಂಶದ ಅಶೋಕನು ಭರತ ವರ್ಷವೂ ಕಂಡಂತಹ ಅಪೂರ್ವ ಮಹಾರಾಜರುಗಳಲ್ಲಿ ಒಬ್ಬನು. ಅವನನ್ನು ದೇವಾನಂಪ್ರೀಯ ರಾಜರ್ಷಿ ಎಂದೂ ಕರೆಯಬಹುದು. ಅಶೋಕನ ಕಾಲ ಕ್ರಿ.ಪೂ. 272–231, ಅವನು ಇಂದಿನ ಬುದ್ಧಗಯಾ ಮತ್ತು ಪಾಟ್ನಾ ಪ್ರದೇಶಗಳಲ್ಲಿ ಹರಡಿದ್ದ ಮೌರ್ಯರ ಸಾರ್ವಭೌಮತ್ವದ ಚಕ್ರವರ್ತಿಯಾಗಿದ್ದನು ಎಂಬುದನ್ನು ದಾಖಲಿಸಿರುತ್ತದೆ.

ಕ್ರಿ.ಪೂ. 262–61ರ ಕಾಲಸಂದರ್ಭದಲ್ಲಿ ನಡೆದಿರುವಂತಹ ಕಳಿಂಗ ಯುದ್ಧದ ಘೋರ ಸನ್ನಿವೇಶ ಅಪಾರ ಸಾವು ನೋವುಗಳಿಂದ ಮರುಗಿ ಶಾಂತಿ ಅಹಿಂಸೆಗಳಿಂದ ಬದುಕಲು ಕ್ರಿ.ಪೂ. 263ರಲ್ಲಿ ಬೌದ್ಧ ಧಮ್ಮವನ್ನು ಸ್ವೀಕರಿಸಿದನು. ಹೀಗಾಗಿ ಕಳಿಂಗದ ಯುದ್ಧವೂ ಸಾಮ್ರಾಟ್ ಅಶೋನ ಪ್ರಥಮ ಮತ್ತು ಕೊನೆಯ ಕದನವೇ ಆಗಿರುತ್ತದೆ ಎಂಬುದು ಜಗತ್ತಿನ ಚರಿತ್ರೆಯಲ್ಲಿ ದಾಖಲಾಗಿರುತ್ತದೆ. ಬೌದ್ಧಧಮ್ಮಕ್ಕೆ ತನ್ನನ್ನು ತಾನು ಸಂಪೂರ್ಣವಾಗಿಯೇ ಅರ್ಪಿಸಿಕೊಂಡು ಬೌದ್ಧಧಮ್ಮದ ತತ್ತ್ವಗಳಂತೆಯೇ ಆಡಳಿತವನ್ನು ನಡೆಸಿದ್ದನು. ಸಾಮ್ರಾಟ್ ಅಶೋಕ ಬರೀ ಆಡಳಿತವನ್ನು ಮಾತ್ರ ಮಾಡಿದವನ್ನಲ್ಲ ಅದರೊಟ್ಟಿಗೆ ದೇಶ ವಿದೇಶಗಳಲ್ಲಿಯೂ ಈ ಬೌದ್ಧಧಮ್ಮವನ್ನು ಪ್ರಚಾರ ಮಾಡಲು ಕ್ರಮವನ್ನು ಕೈಗೊಂಡಿದ್ದನು. ತನ್ನ ಮಕ್ಕಳಾದಂತಹ ಮಹೇಂದ್ರ ಮತ್ತು ಸಂಘಮಿತ್ರ ಎಂಬುವರನ್ನು ಹತ್ತಿರದ ಶ್ರೀಲಂಕಾ ದೇಶಕ್ಕೆ ಬೌದ್ಧಧಮ್ಮದ ಪ್ರಚಾರಕ್ಕಾಗಿಯೇ ಕಳುಹಿಸಿದ್ದನು ಎಂಬುದನ್ನು ಗ್ರಹಿಸಬಹುದು.

ಕರ್ನಾಟಕದ ಕೆಲವು ಭಾಗಗಳು ಮೌರ್ಯರ ಸಾಮ್ರಾಜ್ಯದ ಅಧೀನ ರಾಜ್ಯದಲ್ಲಿ ಇದ್ದುದ್ದು ನಿಜ ಎಂಬುದಕ್ಕೆ ಸಾಮ್ರಾಟ್ ಅಶೋಕನ ಆಡಳಿತ ಕಾಲದಲ್ಲಿನ ಸರಿಸುಮಾರು ಹನ್ನೊಂದು ಶಾಸನಗಳು ನಮ್ಮ ಕರ್ನಾಟಕ ರಾಜ್ಯದಲ್ಲಿಯೇ ಸಿಕ್ಕಿರುತ್ತವೆ. ಅವುಗಳ ಪೈಕಿ ಮೂರು ದಕ್ಷಿಣದ ಚಿತ್ರದುರ್ಗ ಜಿಲ್ಲೆಯಲ್ಲಿವೆ. ಅಲ್ಲಿಯವರೆಗೆ ಅಶೋಕನ ರಾಜ್ಯವಿತ್ತೆಂದು ಖಚಿತ ಪಡಿಸಬಹುದು. ಇದರಿಂದ ಕರ್ನಾಟಕದ ಬಹುಭಾಗ ಮೌರ್ಯ ಸಾಮ್ರಾಟರ ಆಡಳಿತಕ್ಕೆ ಒಳಪಟ್ಟಿತ್ತೆಂದು ಗ್ರಹಿಸಬಹುದಾಗಿದೆ. ಈ ಎಲ್ಲಾ ನೆಲೆ – ಹಿನ್ನೆಲೆಯಿಂದಲೇ ಸಾಮ್ರಾಟ್ ಅಶೋಕನ ಸಾಮ್ರಾಜ್ಯಕ್ಕೆ ಇಡೀ ಭರತ ಖಂಡವೇ ಸೇರಿತ್ತು ಎಂಬುದು ಕಂಡುಬುರುತ್ತದೆ.

ಸಾಮ್ರಾಟ್ ಅಶೋಕನ ಮೂಲಕವೇ ಬೌದ್ಧಧಮ್ಮವು ಕರ್ನಾಟಕಕ್ಕೆ ಕಾಲಿಟ್ಟಿತ್ತು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ, ಈಗಾಗಲೇ ದಾಖಲಿಸಿರುವಂತೆಯೇ ಕ್ರಿ.ಪೂ. 261ರಲ್ಲಿ

ಜರುಗಿದ ಕಳಿಂಗ ಯುದ್ಧದ ಅನಂತರ ಸಾಮ್ರಾಟ್ ಅಶೋಕನ ಕಾಲದಲ್ಲಿ ಬೌದ್ಧಧಮ್ಮವೂ ದಕ್ಷಿಣ ಭಾರತಕ್ಕೆ ಹೆಚ್ಚಿನ ರೀತಿಯಲ್ಲಿಯೇ ಪಸರಿಸಿತ್ತು ಎಂಬುದನ್ನು ಧೃಡಪಡಿಸಬಹುದು. ಕಳಿಂಗ ಯುದ್ಧದ ಅನಂತರ ಚಂಡ ಅಶೋಕ ಜೀವಪರ ಮಾನವೀಯ ಮೌಲ್ಯವನ್ನು ಬೋಧಿಸುವ ಬೌದ್ಧಧಮ್ಮದ ಕಾರುಣ್ಯದಿಂದಲೇ ಕೂಡಿದ್ದಂತಹ ಧಾರ್ಮಿಕ ಆಂದೋಲನದಲ್ಲಿ ಹೆಚ್ಚು ತೊಡಗಿದನು ಎಂಬುದನ್ನು ಗುರುತಿಸಬಹುದು. ಹಾಗೆಯೇ ಅಶೋಕನ ಕಾಲದಲ್ಲಿ ಸಾಮ್ರಾಜ್ಯಾದಾದ್ಯಂತ ರಸ್ತೆಗಳು ನಿರ್ಮಾಣಗೊಂಡಂತೆ ಬೌದ್ಧ ವರ್ತಕರು ದಕ್ಷಿಣ ಭಾರತದ ಕಡೆ ಬರತೊಡಗಿದರು. ಅಶೋಕನು ಬೌದ್ಧಧಮ್ಮದ ಪ್ರಚಾರಕ್ಕಾಗಿಯೇ ಮಹಾದೇವ ಥೇರ ಎಂಬ ಭಿಕ್ಷುವನ್ನು ಮಹಿಷ ಮಂಡಲಕ್ಕೆ ರಕ್ಷಿತ ಎಂಬ ಬೌದ್ಧ ಭಿಕ್ಷುವನ್ನು ಬನವಾಸಿಗೆ ಕಳುಹಿಸಿದ ಬಗೆಗೆ ಸಿಲೋನಿನಲ್ಲಿ ದೊರೆತ್ತಿರುವಂತಹ ಮಹಾವಂಶದಿಂದಲೇ ತಿಳಿದುಬರುತ್ತದೆ. ಬೌದ್ಧಧಮ್ಮದ ಪ್ರಸಾರ ಎಂದರೆ; ಅದವೇ ಮೌರ್ಯ ಸಾಮ್ರಾಜ್ಯದ ವಿಸ್ತರಣೆಯೇ ಆಗಿರುತ್ತದೆ ಎಂದು ಹೇಳಬಹುದು. ಮಹಾದೇವ ಏಷ್ಯಾದ ಬೆಳಕದಂತಹ ಮಹಾಗುರು ಬುದ್ಧರ ತತ್ವಗಳನ್ನು ಮಹಿಷ ಮಂಡಲದಲ್ಲಿ ಪ್ರಚಾರವನ್ನು ಮಾಡಿರುತ್ತಾನೆ ಎಂಬುದು ತಿಳಿದುಬರುತ್ತದೆ. ಇದರ ಕಾರಣ ಮತ್ತು ಪರಿಣಾಮವಾಗಿಯೇ ಸರಿಸುಮಾರು 40 ಸಾವಿರದಷ್ಟು ಬೌದ್ಧಧಮ್ಮದ ಅನುಯಾಯಿಗಳು ಅಂದೇ ಇದ್ದರು ಎಂಬುದು ಹಾಗೂ ಸರಿಸುಮಾರು 40 ಸಾವಿರ ಜನ ಬೌದ್ಧ ಭಿಕ್ಷುಗಳು ಕೂಡ ಇದ್ದರೂ ಎಂಬುದು ತಿಳಿದು ಬಂದಿರುತ್ತದೆ. ಹಾಗೆಯೇ ಭಿಕ್ಷು ರಖ್ಖಿತರ ಬೌದ್ಧಧಮ್ಮದ ಪ್ರಚಾರದ ಕಾರಣ ಮತ್ತು ಪರಿಣಾಮವಾಗಿಯೇ ಬನವಾಸಿಯಲ್ಲಿ ಸರಿಸುಮಾರು 60 ಸಾವಿರದಷ್ಟು ಜನ ಬೌದ್ಧಧಮ್ಮವನ್ನು ಕೂಡ ಸ್ವೀಕರಿಸಿದರೆಂದು ಮತ್ತು 37 ಸಾವಿರ ಜನ ಬೌದ್ಧಭಿಕ್ಷುಗಳಾದರೆಂದು ಹಾಗೂ ಭಿಕ್ಷು ರಕ್ಷಿತರು ಈ ಭಾಗದಲ್ಲಿ ಸರಿಸುಮಾರು 500ರಷ್ಟು ಬೌದ್ಧ ವಿಹಾರಗಳನ್ನು ಕೂಡ ಕಟ್ಟಿಸಿದರೆಂದು ತಿಳಿದುಬರುತ್ತದೆ. ಇದರಿಂದ ದಕ್ಷಿಣ ಭಾರತದ ಅದರಲ್ಲೂ ಬಹುಮುಖ್ಯವಾಗಿ ಕರ್ನಾಟಕ ರಾಜ್ಯವೂ ಅಂದೇ, ಸಾಮ್ರಾಟ್ ಅಶೋಕನ ಧಾರ್ಮಿಕ ಆಂದೋಲನಕ್ಕೆ ಸೇರ್ಪಡೆಯಾಗಿತ್ತು. ಇದಕ್ಕೆ ನಮ್ಮ ಕರ್ನಾಟಕ ರಾಜ್ಯದ ಚಿತ್ರದುರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ದೊರೆಯುವ ಶಾಸನಗಳೇ ಜೀವಂತ ಮತ್ತು ಪ್ರತ್ಯೇಕ್ಷದರ್ಶಿಯ ಸಾಕ್ಷಿಗಳೇ ಆಗಿವೆ ಎಂದು ಹೇಳಬಹುದು. ಬೌದ್ಧಧಮ್ಮದ ಮೂಲ ಸೆಲೆಯ ತತ್ವಗಳನ್ನು ಪ್ರಧಾನವಾಗಿ ಬೋಧಿಸಿರುವಂತಹ ಶಾಸನಗಳನ್ನು ಸಾಮ್ರಾಟ್ ಅಶೋಕನು ತನ್ನ ಸಾಮ್ರಾಜ್ಯದ ಎಲ್ಲೇಡೆ ಹಾಕಿಸುವುದರ ಮುಖೇನ ಧಮ್ಮದ ಪ್ರಸಾರವನ್ನು ಪ್ರಖರವಾಗಿಯೇ ಮಾಡಿದನು ಎಂಬುದು ತಿಳಿದುಬರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಇಂದಿನವರೆಗೆ ದೊರೆತಿರುವಂತಹ ಸಾಮ್ರಾಟ್ ಅಶೋಕನ ಶಾಸನಗಳು ಮತ್ತು ಬೌದ್ಧಧಮ್ಮದ ಗ್ರಂಥಗಳಲ್ಲಿ ಬರುವ ಸಾಂಪ್ರದಾಯಿಕ ನಿರೂಪಣೆಯೂ ಬಹುಮುಖ್ಯವಾಗಿಯೇ ಕ್ರಿ.ಪೂ. 3ನೇ ಶತಮಾನದ ಹೊತ್ತಿಗೆ ಮೌರ್ಯ ಸಾಮ್ರಾಟರ ಆಡಳಿತದ ಪ್ರಭಾವಕ್ಕೆ ಒಳಪಟ್ಟಿತ್ತು ಮತ್ತು

ಹಾಗೆಯೇ ಪ್ರಧಾನವಾಗಿ ಬೌದ್ಧಧಮ್ಮ ಪ್ರಭಾವಕ್ಕೂ ಕೂಡ ಒಳಗಾಗಿತ್ತೆಂಬುದಕ್ಕೆ ಹಲವು ಹತ್ತು ದಾಖಲೆಗಳು ಉಲ್ಲೇಖಗಳ ಮೂಲಕ ಸಾಕ್ಷೀಗಳಾಗಿವೆ. ಬೌದ್ಧಧಮ್ಮದ ಪ್ರಚಾರದ ಕಾರ್ಯಚರಣೆಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಸನ್ನತಿಯಲ್ಲಿನ ಬೌದ್ಧ ಸ್ಥಳಗಳೂ ಮತ್ತು ಸ್ಮಾರಕಗಳು ಅತ್ಯಂತ ಹಳೆಯವು ಎನ್ನಬಹುದು, ಐಹೊಯ ಬೌದ್ಧ ಚೈತ್ಯವು ಐದನೆಯ ಶತಮಾನದ್ದು ಮತ್ತು ಮಹಾಯಾನದ ಪ್ರಭಾವಕ್ಕೆ ಒಳಗಾಗಿರುತ್ತದೆ, ಕದರಿ. ಬಳ್ಳಿಗಾವೆ, ತೊರ್ಕೆ, ಕೋಳವಾಡ, ಗದಗ ಜಿಲ್ಲೆಯ ದಂಬಲ್‌ನಲ್ಲಿ ಕ್ರಿ.ಶ 12ನೇ ಶತಮಾನದಲ್ಲಿ ಬೌದ್ಧಧಮ್ಮದ ಪ್ರಚಾರ ಕೇಂದ್ರವಿತ್ತು ಎಂಬುದನ್ನು ಗುರುತಿಸಲಾಗಿದೆ, ಡಂಬಳದಲ್ಲಿನ ಕ್ರಿ.ಶ 1095ರ ಶಾಸನವೊಂದರ ಪ್ರಕಾರ; ಬೌದ್ಧ ದೇವತೆ ತಾರಾ ದೇವಾಲಯ ಮತ್ತು ಬೌದ್ಧ ವಿಹಾರವು ನಿರ್ಮಾಣಗೊಂಡಿತ್ತು. ಬನವಾಸಿಯಲ್ಲಿ ಕ್ರಿ.ಶ 642ರಲ್ಲಿ 400 ಸಂಘರಾಮಗಳು ಮತ್ತು 10000 ಬೌದ್ಧಧಮ್ಮದ ಅನುಯಾಯಿಗಳು ಇದ್ದರು. ಹಾಗೆಯೇ, ಸಾಮ್ರಾಟ್ ಅಶೋಕನ ಕಾಲದಿಂದಲೂ ಕೂಡ ಈ ಬನವಾಸಿಯಲ್ಲಿ ಬೌದ್ಧಧಮ್ಮದ ಪ್ರಬಲ ಅಸ್ತಿತ್ವವಿತ್ತು. ಶ್ರಾವಕಯಾನ, ಮಹಾಯಾನ ಮತ್ತು ವಜ್ರಯಾನವು 12ನೇ ಶತಮಾನದವರೆವಿಗೂ ಪ್ರವರ್ಧಮಾನಕ್ಕೆ ಬಂದಿತ್ತು ಎಂಬುದನ್ನು ಗ್ರಹಿಸಲಾಗಿದೆ. ಇಂಡಿ, ಕಲ್ಯ, ಚಂದ್ರವಳ್ಳಿ ಇನ್ನೂ ಮುಂತಾದವೂ ಕೂಡ ಬೌದ್ಧನೆಲೆಯ ಕೇಂದ್ರಗಳೇ ಆಗಿದ್ದವು ಎಂಬುದನ್ನು ಹಲವು ಹತ್ತು ಸಂಶೋಧನಾ ಅಧ್ಯಯನಗಳು ಗುರುತಿಸಿ ಹೊರತಂದಿರುವುದನ್ನು ಗ್ರಹಿಸಲಾಗಿದೆ. 1888ರಲ್ಲಿ ಚಂದ್ರವಳ್ಳಿಯ ಪ್ರದೇಶದಲ್ಲಿ ದೊರಕಿರುವಂತಹ ಬಹುಸಂಖ್ಯೆಯ ನಾಣ್ಯಗಳು ಬೌದ್ಧ ಸೀಸದ ನಾಣ್ಯಗಳಾಗಿದ್ದವು ಎಂಬುದು ಬಿ.ಎಲ್. ರೈಸ್ ಅವರ ಅಭಿಪ್ರಾಯವಾಗಿದೆ. ಈ ಪ್ರದೇಶದಲ್ಲಿ ಬೌದ್ಧಧಮ್ಮದ ಅಸ್ತಿತ್ವದ ಬಗೆಗೆ ಕಾಣಿಸಿಕೊಂಡ ಮೊದಲ ಸುಳುಹು ಎನ್ನಬಹುದು. ಮುಂದೆ 1908ರಲ್ಲಿ ಆರ್. ನರಸಿಂಹಚಾರ್ಯ ಅವರು ಮತ್ತು 1929ರಲ್ಲಿ ಎಂ.ಎಚ್.ಕೃಷ್ಣಪ್ಪ ಅವರು ಇದೇ ಚಂದ್ರವಳ್ಳಿಯಲ್ಲಿ ಉತ್ಖನನವನ್ನು ಕೂಡ ಕೈಗೊಂಡು ಹಲವು ಅವಶೇಷಗಳನ್ನೂ ಪತ್ತೆ ಹಚ್ಚಿದ್ದಾರೆ ಎಂಬುದು ಚರಿತ್ರೆಯಲ್ಲಿ ದಾಖಲೀಕರಣಗೊಂಡಿರುತ್ತದೆ.

ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಸನ್ನತಿಯು ಕ್ರಿ.ಶ. 1ನೇ ಹಾಗೂ 2ನೇ ಶತಮಾನದಲ್ಲಿ ಬೆಳವಣಿಗೆಯನ್ನು ಹೊಂದಿದ್ದಂತಹ ಬೌದ್ಧಧಮ್ಮದ ಪ್ರಚಾರ ಕೇಂದ್ರ ಎಂಬ ಮಾತು ಸತ್ಯವಾದುದ್ದು. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಇದ್ದವು ಎಂದು ಹೇಳಲಾದ ಬೌದ್ಧಧಮ್ಮದ ಕೇಂದ್ರಗಳೆಂದರೆ; ಒಂದು ಸನ್ನತಿ, ಮತ್ತೊಂದು ಬನವಾಸಿ. ಈ ಸನ್ನತಿ ಪ್ರದೇಶವನ್ನು ಆಳ್ವಕೆ ಮಾಡಿದ ಸಾಮ್ರಾಟ್ ಅಶೋಕನು ಜಾಗೃತ ಧಮ್ಮ, ಶಿಕ್ಷಣ ಸಾಂಸ್ಕೃತಿಕ ಕೇಂದ್ರವಾಗಿಯೇ ಪರಿವರ್ತಿಸಿದ್ದ ಅಶೋಕನು ಮೌರ್ಯರ ಪ್ರಖ್ಯಾತ ಮಹಾರಾಜನಾಗಿದ್ದನು. ಈ ಸಾಮ್ರಾಟ ಅಶೋಕನು ತನ್ನ ಬೌದ್ಧಧಮ್ಮದ ತತ್ವ ಸಿದ್ಧಾಂತ ಮತ್ತು ನಾಡು ನುಡಿಗಳನ್ನು ಅವಿರತವಾಗಿಯೇ ಪ್ರಚಾರವನ್ನು ಮಾಡುವ ಮುಖೇನ ಮಹಾಗುರು ಬುದ್ಧರ ಅನೇಕ ತತ್ವ ಸಿದ್ಧಾಂತಗಳನ್ನು ಬೋಧಿಸಿ ಜನತೆಗೆ ನೀತಿ ಮಾರ್ಗದಲ್ಲಿ

ಬದುಕುವಂತೆ ಒಳ್ಳೆಯ ದಾರಿಯನ್ನು ತೋರಿಸಿದನು. ಈತನ ಬೋಧನೆಯ ಮೂಲಕವೇ ಬೌದ್ಧಧಮ್ಮವೂ ಸಾಕಷ್ಟು ಕರ್ನಾಟಕ ರಾಜ್ಯದಲ್ಲಿ ಪ್ರಚಾರಕ್ಕೂ ಬಂದಿತ್ತು ಎಂದೇ ಹೇಳಬಹುದು.

ಕರ್ನಾಟಕ ರಾಜ್ಯದ ಉತ್ತರ ಕರ್ನಾಟಕದಲ್ಲಿ ಬೌದ್ಧಧಮ್ಮವೂ ಕೆಲವು ದಶಕಗಳ ಹಿಂದೆಯೇ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಸಾಮ್ರಾಟ್ ಅಶೋಕನ ಶಾಸನವನ್ನು ಕಂಡುಹಿಡಿದ ಅನಂತರ ಮತ್ತು ಸನ್ನತಿಯಲ್ಲಿನ ಪುರಾತತ್ತ್ವ ಶಾಸ್ತ್ರದ ಉತ್ಖನನಗಳ ಸರಣಿಯ ಮೂಲಕ ಕರ್ನಾಟಕ ರಾಜ್ಯದ ಐತಿಹಾಸಿಕ ಮಹತ್ವದ ಬೆಳಕು ಚೆಲ್ಲುವ ಮುಖೇನ ಬೌದ್ಧಧಮ್ಮದ ನೆಲೆ – ಹಿನ್ನೆಲೆಯ ಅನಂತರ ಪ್ರಮುಖವಾದಂತಹ ಬೆಳವಣಿಗೆಯನ್ನು ಕಂಡಿರುವುದನ್ನು ಗ್ರಹಿಸಬಹುದು. 1954 ರಿಂದ 1995ರವರೆಗಿನ ಅವಧಿಯಲ್ಲಿ ಸನ್ನತಿಯಲ್ಲಿ 81 ಶಿಲಾ ಶಾಸನಗಳು, 2 ಸ್ತೂಪಗಳು, 3 ದಿಬ್ಬಗಳು ಅಥವಾ ರಕ್ಷಣಾ ಕೋಟೆಗಳನ್ನು ಕೂಡ ಪತ್ತೆ ಹಚ್ಚಲಾಗಿದೆ. ಇವೆಲ್ಲವೂ ಕೂಡ ಬೌದ್ಧಧಮ್ಮದ ರಾಜಕೀಯ ಚರಿತ್ರೆಯನ್ನು ಪ್ರಸ್ತುತ ಕಾಲಸಂದರ್ಭದಲ್ಲಿ ಪ್ರಚೂರ ಪಡಿಸುತ್ತದೆ ಎಂದು ಹೇಳಬಹುದು. ಹಾಗೆಯೇ, ಬೆಂಗಳೂರು ಸಮೀಪದ ಮಾಗಡಿ ರಸ್ತೆಯಲ್ಲಿರುವಂತಹ ಕಲ್ಯಾ ಗುಹೆಗಳಲ್ಲಿ ಬೌದ್ಧಧಮ್ಮದ ಅವಶೇಷಗಳು ಲಭಿಸಿರುತ್ತವೆ.

ಬೌದ್ಧಧಮ್ಮದ ರೀತಿ ನೀತಿಗಳು ಹುಲುಸಾಗಿ ಬೆಳೆದು ಹೆಚ್ಚು ಕ್ರೀಯಾಶೀಲವಾಗುವಂತೆ ಮತ್ತು ಬೌದ್ಧಧಮ್ಮವೂ ಉನ್ನತ ಶಿಖರಕ್ಕೆರಲು ಮೌರ್ಯರು ಅದರಲ್ಲೂ ಬಹುಮುಖ್ಯವಾಗಿ ಸಾಮ್ರಾಟ್ ಅಶೋಕನೇ ಕಾರಣವೆಂದು ಹೇಳಬಹುದು. ಹೀಗೆ, ಕರ್ನಾಟಕ ರಾಜ್ಯದಲ್ಲಿ ಮೌರ್ಯರ ಆಡಳಿತದಲ್ಲಿ ಬೌದ್ಧಧಮ್ಮವೂ ಹೆಚ್ಚು ಪ್ರಬುದ್ಧ ಮಾನಕ್ಕೆ ಬಂದಿತ್ತು. ಮತ್ತೇ, ಅದೇ, ಅಂದಿನ ರಾಜ್ಯಾಡಳಿತದ ಕ್ರಮವೂ ಕೂಡ ಆಗಿತ್ತು ಎಂದೇ ಹೇಳಬಹುದು.

**ಗ್ರಂಥಸೂಚಿ**


1. ಬಿ.ಪಿ.ಹೂಗಾರ, **ಕರ್ನಾಟಕದ ಇತಿಹಾಸ**.
2. ತೆಲಗಾವಿ ಲಕ್ಷ್ಮಣ, **ಮೌರ್ಯ ಶಾತವಾಹನ ಯುಗ**
3. ಜಿ.ಎಸ್. ಶಿವರುದ್ರಪ್ಪ, **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–01**.
4. ಹೆಚ್.ಎಮ್. ಬಸವರಾಜು, **ದಕ್ಷಿಣ ಭಾರತದ ಇತಿಹಾಸ**.
5. ಡಾ.ಸೂರ್ಯನಾಥ ಕಾಮತ, **ಕರ್ನಾಟಕದ ಸಂಕ್ಷಿಪ್ತ ಇತಿಹಾಸ**.
6. ಡಾ.ಅ.ಸುಂದರ, **ಕರ್ನಾಟಕ ಚರಿತ್ರೆ–ಸಂ.1**.
7. ಡಾ.ಎಂ. ಚಿದಾನಂದಮೂರ್ತಿ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**
8. ಡಾ.ತಾಳ್ತಜೆ ವಸಂತಕುಮಾರ, **ಬೌದ್ಧಾಯನ**.
9. ಡಾ.ತಾಳ್ತಜೆ ವಸಂತಕುಮಾರ, **ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ**